ಓ ಎಸ್ ನಂ. 01/2016

ಡಿ ಡಬ್ಲ್ಯು 2

ದಿನಾಂಕ 09/02/2026 ರಂದು ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲುಃ ವಾದಿ ಪರಃ ಶ್ರೀ ಎಂ ಬಿ ವಕೀಲರಿಂದಃ</u>

ಈ ದಾವೆಯ ವಾದಿ ಮತ್ತು ಪ್ರತಿವಾದಿಗಳು ಗೊತ್ತು ಎಂದು ಹೇಳಿದ್ದು ಎಷ್ಟು ವರ್ಷಗಳಿಂದ ಪರಿಚಯ ಎಂದರೆ ಸಾಕ್ಷಿ ಸುಮಾರು ನನಗೆ ಹುಟ್ಟಿದಾಗಿನಿಂದಲೂ ಸಹ ಪರಿಚಯ ಎಂದು ನುಡಿಯುತ್ತಾರೆ. 7 ನೇ ಪ್ರತಿವಾದಿ ಲೋಕೇಶ್ ನನಗೆ ಸಂಬಂಧಿಯಾಗಬೇಕು ಎಂದರೆ ಸರಿಯಲ್ಲ. ವಾದಿ ಮತ್ತು ಪ್ರತಿವಾದಿಗಳು ಒಟ್ಟು ಕುಟುಂಬದ ಸದಸ್ಯರಲ್ಲ ಎಂದು ನಾನು ಯಾವ ರೀತಿ ಹೇಳುತ್ತಿದ್ದೇನೆ ಎಂದರೆ ಸಾಕ್ಷಿ ಅವರೆಲ್ಲರೂ ಬೇರೆ ಬೇರೆಯಾಗಿದ್ದಾರೆ ಆಗಾಗಿ ಎಂದು ನುಡಿಯುತ್ತಾರೆ. ವಾದಿ ಮತ್ತು ಪ್ರತಿವಾದಿಗಳು ಎಷ್ಟು ವರ್ಷಗಳಿಂದ ಬೇರೆ ಬೇರೆಯಾಗಿದ್ದಾರೆ ಎಂದರೆ ಸಾಕ್ಷಿ ನಿಖರವಾಗಿ ಎಷ್ಟು ವರ್ಷಗಳು ಎಂದು ಹೇಳಲಾಗುವುದಿಲ್ಲ, ನಾನು ಚಿಕ್ಕವನಿದ್ದಾಗಿನಿಂದಲೂ ಅವರು ಬೇರೆ ಬೇರೆ ಇದ್ದಾರೆ ಎಂದು ನುಡಿಯುತ್ತಾರೆ. ಆ ರೀತಿ ಬೇರೆ ಬೇರೆ ಆಗುವ ಸಮಯದಲ್ಲಿ ಪಂಚಾಯಿತಿಯಲ್ಲಿ ನಾನು ಇದ್ದೇನಾ ಎಂದರೆ ಸಾಕ್ಷಿ ಇಲ್ಲವೆಂದು ನುಡಿಯುತ್ತಾರೆ. ಪ್ರಸ್ತುತ ದಾವೆಯನ್ನು ಸಲ್ಲಿಸುವ ಪೂರ್ವದಲ್ಲಿ ವಾದಿ ಆಸ್ತಿಯನ್ನು ವಿಭಾಗ ಮಾಡಿಕೊಂಡುವಂತೆ ಹುಲ್ಲೇಹಳ್ಳಿ ನರಸಿಂಹಮೂರ್ತಿ ಸ್ವಾಮಿ ದೇವಾಲಯಕ್ಕೆ ಒಂದು ಅರ್ಜಿಯನ್ನು

ನೀಡಿರುವ ವಿಚಾರ ನನಗೆ ಗೊತ್ತಾ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸದರಿ ಅರ್ಜಿಯ ವಿಚಾರ ದೇವಾಲಯದಲ್ಲಿ ನಡೆದ ಪಂಚಾಯಿತಿಯಲ್ಲಿ ಬಗೆಹರಿಯಿತೆ ಇಲ್ಲವೇ ಎಂದರೆ ಸಾಕ್ಷಿ ಇಲ್ಲವೆಂದು ನುಡಿಯುತ್ತಾರೆ. ದೇವಾಲಯದಲ್ಲಿ ನಡೆದಂತಹ ಪಂಚಾಯಿತಿಯಲ್ಲಿ ಒಟ್ಟು ಕುಟುಂಬದ ಜಮೀನು, ಸೈಟು ಮತ್ತು ಮನೆಗಳ ಬಗ್ಗೆ ಮಾತುಕತೆ ಮಾತ್ರ ನಡೆದಿದ್ದು, ಸಮಸ್ಯೆ ಬಗೆಹರಿಯಲಿಲ್ಲ ಎಂದು ನುಡಿಯುತ್ತಾರೆ. ಆ ರೀತಿ ಸಮಸ್ಯೆ ಬಗೆಹರಿಯದೇ ಇರುವಾಗ ವಾದಿ ಪ್ರಸ್ತುತ ದಾವೆಯನ್ನು ಹೂಡಿರುತ್ತಾರೆ ಎಂದರೆ ಸಾಕ್ಷಿ ಹೂಡಿರಬಹುದು ಎಂದು ನುಡಿಯುತ್ತಾರೆ. ವಾದಿ ಮತ್ತು ಪ್ರತಿವಾದಿಗಳ ಕುಟುಂಬದ ಮೂಲ ಪುರುಷ ಗೋವಿಂದಪ್ಪ ಎಂದರೆ ಸರಿ. ವಾದಿ ಗೋವಿಂದಪ್ಪರವರ ಅಜ್ಜಿಯ ಹೆಸರು ಲಕ್ಕಮ್ಮ ಎಂದರೆ ಸರಿ. 7 ನೇ ಪ್ರತಿವಾದಿ ಲೋಕೇಶ್ ರವರ ಅಜ್ಜಿಯ ಹೆಸರು ಕೊಂತಮ್ಮ ಎಂದರೆ ಸರಿ. ಒಟ್ಟು ಕುಟುಂಬಕ್ಕೆ ಸೇರಿದ ಹಳೆ ಮನೆ ಮತ್ತು ಸೈಟಿನಲ್ಲಿ ಪ್ರತಿವಾದಿಗಳೆ ವಾಸ ಇದ್ದಾರೆ ಎಂದರೆ ಸಾಕ್ಷಿ ವಾದಿ ಮತ್ತು ಪ್ರತಿವಾದಿಗಳು ಇದ್ದಾರೆ ಎಂದು ನುಡಿಯುತ್ತಾರೆ. 7 ನೇ ಪ್ರತಿವಾದಿ ನನಗೆ ಸ್ವಂತ ಅಳಿಯನಾಗಬೇಕಾಗಿರುವುದರಿಂದ ಅವರಿಗೆ ಸಹಾಯ ಮಾಡಲು ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳು ವಿಭಾಗವಾಗದೇ ಇದ್ದರೂ ಸಹ

ನಾನು 7ನೇ ಪ್ರತಿವಾದಿ ಮಾತನ್ನು ಕೇಳಿಕೊಂಡು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ೩ ಎ ಒ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ ಎಂ ಎಫ್ ಸಿ, ಕಡೂರು.